## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್–ಸಂಖ್ಯೆ 129 ರಲ್ಲಿ ದಿನಾಂಕ:28.10.2021 ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು .**

ದಿನಾಂಕ: 28.10.2021 ರಂದು ವಾರ್ಡ್ ಸಂಖ್ಯೆ 129ರ ಅಕ್ಟೋಬರ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ:129 ರ ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು. ಈ ಕೆಳಕಂಡಂತೆ ಸದಸ್ಯರು / ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜಿ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು (ದಾಸರಹಳ್ಳಿ ವಲಯ) ಹಾಗೂ ವಾರ್ಡ್ 129 ನೋಡಲ್ ಅಧಿಕಾರಿಗಳು
2. ಶ್ರೀ.ಬಾಲರಾಜ್, ಮಾರ್ಷಲ್ ವಾರ್ಡ್–129
3. ಸಹಾಯಕ ಅಭಿಯಂತರರು ಶ್ರೀ. ಸಿದ್ಧರಾಮಯ್ಯ ರವರ ಪರವಾಗಿ ಶ್ರೀಮತಿ.ದೀಕ್ಷಾ ರವರು ಹಾಜರಿರುತ್ತಾರೆ.
4. ಶ್ರೀ.ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129 'ಎ' ಹಾಜರಿರುತ್ತಾರೆ.
5. ಶ್ರೀಮತಿ.ಅನಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129 'ಬಿ' ಹಾಜರಿರುತ್ತಾರೆ.
6. ಶ್ರೀ.ದತ್ತಾ, ಎನ್.ಜಿ.ಎಫ್ ಬಡಾವಣೆ ಸ್ಥಳೀಯ ನಿವಾಸಿ, ವಾರ್ಡ್ –129
7. ಹೆಲ್ತ್ ಬಡಾವಣೆಯ ನಿವಾಸಿ, ಶ್ರೀ.ಗೋಪಾಲ್ ವಾರ್ಡ್ –129

ಸದರಿ ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಹೆಲ್ತ್ ಬಡಾವಣೆಯ 6ನೇ "ಬಿ" ಅಡ್ಡರಸ್ತೆ, 3ನೇ "ಎ" ರಸ್ತೆಯಲ್ಲಿ ಮಳೆಯಾದಗ ಹಾಲಿ ಇರುವ ಸೆಕೆಂಡರಿ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೇ ಇರುವುದರಿಂದ ಅಲ್ಲಿನ ಅಕ್ಕ ಪಕ್ಕದ ಮನೆಗಳಿಗೆ ನೀರು ನುಗ್ಗಿ ತುಂಬ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ತತ್ಸಂಬಂಧ ಚರ್ಚಿಸಿಲಾಗಿ ಸದರಿ ವಾರ್ಡಿನ ಸಹಾಯಕ ಅಭಿಯಂತರರು, ಸಕಾನಿಅ ಮಳೆ ನೀರು ಚರಂಡಿ ಮತ್ತು ಸಹಾಯಕ ಅಭಿಯಂತರರು BWSSB ರವರುಗಳೂ ಜಂಟಿಯಾಗಿ ಕೂಡಲೇ ದಿನಾಂಕ ನಿಗಧಿಪಡಿಸಿಕೊಂಡು ಸ್ಥಳ ತಪಾಸಣೆ ನಡೆಸಿ ಪ್ರವಾಹವಾಗದಂತೆ ತಡೆಗಟ್ಟಲು ಅಗತ್ಯ ಕ್ರಮವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು ಹಾಗೂ ಅದರಂತೆ ಎಲ್ಲಾ ಅಭಿಯಂತರರಿಗೆ ದೂರವಾಣಿ ಮುಖಾಂತರ ತಿಳಿಸುತ್ತಾ, ಮುಂದಿನ ಸಭೆಯಲ್ಲಿ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ನೀಡಲು ತಿಳಿಸಲಾಗಿರುತ್ತದೆ.

ಶ್ರೀ.ದತ್ತ ರವರು ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ಎಲ್ಲಾ ರಸ್ತೆಗಳಲ್ಲೂ Street Swiping ಸಮರ್ಪಕವಾಗಿ ಆಗುತ್ತಿಲ್ಲದಿರುವುದರ ಬಗ್ಗೆ ಎಲ್ಲರ ಗಮನಕ್ಕೆ ತರುತ್ತಾ, ಪೌರಕಾರ್ಮಿಕರನ್ನು ನಿಯೋಜಿಸಿ Street Swiping ಮಾಡಿಸಿಕೊಡಬೇಕೆಂದು ಸಕಾನಿಅ ಘನತ್ಯಾಜ್ಯ ನಿರ್ವಹಣೆ ರವರಿಗೆ ಸೂಚಿಸಬೇಕೆಂದು ತಿಳಿಸಿರುತ್ತಾರೆ. ಅದರಂತೆ ಕ್ರಮವಹಿಸಲು ದೂರವಾಣಿ ಮುಖಾಂತರ ಸಕಾನಿಅ ರವರಿಗೆ ತಿಳಿಸಲಾಗಿರುತ್ತದೆ. ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ನೀಡಲು ತಿಳಿಸಲಾಗಿರುತ್ತದೆ.

ಶ್ರೀ.ದತ್ತ ರವರು ಎನ್.ಜಿ.ಎಫ್ ಬಡಾವಣೆಯಲ್ಲಿರುವ ಜೆಐಎಸ್ ಶಾಲೆಯ ಬಳಿ ಇರುವ ಅಡಿಗಾಲುವೆಯ ಚಪ್ಪಡಿಯು ಬದಲಾಯಿಸಬೇಕೆಂದು ಹಲವು ದಿನಗಳಿಂದ ದೂರು ಸಲ್ಲಿಸುತ್ತಿದ್ದರು ಕಾಮಗಾರಿ ವಿಭಾಗದವರು ಯಾವುದೇ ಕ್ರಮ ವಹಿಸಿಲ್ಲದಿರುವ ಬಗ್ಗೆ ಸಭೆಯಲ್ಲಿ ವ್ಯಕ್ತಪಡಿಸಿದ್ದು, ತತ್ಸಂಬಂಧ ಹಾಜರಿದ್ದ ಶ್ರೀಮತಿ.ದೀಕ್ಷಾ ರವರು ಸದರಿ ವಾರ್ಡ್ ವ್ಯಾಪ್ತಿಯು ತೀರ ದೊಡ್ಡದಾಗಿದ್ದು, ಮಳೆಗಾಲದಲ್ಲಿ ದಾಖಲಾಗಿರುವ ತಗ್ಗು ಪ್ರದೇಶದಲ್ಲಿನ ದೂರುಗಳಿಗೆ ಕ್ರಮವಹಿಸುತ್ತಿರುವುದರಿಂದ ಸಾಧ್ಯವಾಗಿಲ್ಲದಿರುವುದಾಗಿ ವ್ಯಕ್ತಪಡಿಸಿದ್ದು, ಕೂಡಲೇ ಬದಲಾಯಿಸಿಕೊಡುವುದಾಗಿ ಸಭೆಯಲ್ಲಿ ತಿಳಿಸಿದ್ದು, ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ದುರಸ್ಥಿ ಪಡಿಸಿ ಸಭೆಯಲ್ಲಿ ತಿಳಿಸಬೇಕೆಂದು ತಿಳಿಸಲಾಯಿತು.

ಎನ್.ಜಿ.ಎಫ್ ಬಡಾವಣೆಯಲ್ಲಿನ 12ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಹಾಗೂ 7ನೇ ಮುಖ್ಯ ರಸ್ತೆಯಲ್ಲಿ 2 ಒಣಗಿದ ಮರವಿದ್ದು, ಯಾವುದೇ ಸಮಯದಲ್ಲಿ ಅದರ ಬಿದುರುಗಳು ಹಾಗೂ ರಂಬೆಗಳು ಸಾರ್ವಜನಿಕರ ಮೇಲೆ ಬೀಳುವ ಸಂಭವ ಹೆಚ್ಚಾಗಿರುವುದರಿಂದ ಕೂಡಲೇ ತೆರವುಗೊಳಿಸಬೇಕೆಂದು ಸಭೆಯಲ್ಲಿ ಕೋರಿದರು. ತತ್ಸಂಬಂಧ ಈಗಾಗಲೇ ರಾ.ರಾ.ನಗರದ ಡಿ.ಸಿ.ಎಫ್ ರವರಿಗೆ ತಿಳಿಸಲಾಗಿದ್ದು, ಕೂಡಲೇ ಪರಿಶೀಲಿಸಿ ತೆರವುಗೊಳಿಸಲು ಅಗತ್ಯ ಕ್ರಮವಹಿಸಲು, ಅಗತ್ಯಬಿದ್ದಲ್ಲಿ BSCOM ರವರೊಂದಿಗೆ ಸಮನ್ವಯ ನಡೆಸಿ ತೆರವುಗೊಳಿಸಬೇಕೆಂದು ಡಿ.ಸಿ.ಎಫ್/ಆರ್.ಎಫ್.ಓ ರಾ.ರಾ.ನಗರ ರವರಿಗೆ ತಿಳಿಸಬೇಕೆಂದು ನಿರ್ಣಯಿಸಲಾಯಿತು.

ಘನತ್ಯಾಜ್ಯ ನಿರ್ವಹಣೆಗೆ ಸಂಬಂದಿಸಿದಂತೆ, ಮನೆ ಮನೆಯಿಂದ ಹಸಿ ತ್ಯಾಜ್ಯ ಸಂಗ್ರಹಣೆಯಲ್ಲಿ ಅನೇಕ ಆಟೋ ಟಿಪ್ಪರ್‌ಗಳಲ್ಲಿ ಹೆಲ್ಪರ್ ಗಳು ಇಲ್ಲದಿರುವುದರಿಂದ ಸಮರ್ಪಕವಾಗಿ ಹಸಿ ತ್ಯಾಜ್ಯ ಸಂಗ್ರಹಣೆಯಾಗುತ್ತಿಲ್ಲವೆಂದು ಸ್ಥಳೀಯ ನಿವಾಸಿಗಳೂ ತಿಳಿಸಿದ್ದು, ತತ್ಸಂಬಂಧ ಎಲ್ಲಾ ಆಟೋ ಟಿಪ್ಪರ್‌ಗಳಲ್ಲಿ ಕಡ್ಡಾಯವಾಗಿ ಸಹಾಯಕರುಗಳು ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.